ಪ್ರಧಾನ ಸಿವಿಲ್ ಮತ್ತು ಜೆಎಮ್‌ಎಫ್ ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

ಸಿ.ಸಿ ನಂಃ **824/ 2018**

ಫಿರ್ಯಾದಿದಾರಃ ಕರ್ನಾಟಕ ಸರ್ಕಾರ ಪರವಾಗಿ ಯಾದಗಿರಿ ಅಬಕಾರಿ
ಪೋಲಿಸ್ ಠಾಣೆ.

// ವಿರುದ್ಧ //

**1** ನೇ ಆರೋಪಿಃ ಶ್ರೀ ವೆಂಕಟೇಶ ತಂದೆ ಮರೆಪ್ಪ ಶ್ರೀಗಿರಿ,
ವಃ **35** ವರ್ಷ, ಸಾಃ ಈ/**54**, ಶಹಾಬಾದ ರೋಡ ಪ್ರಶಾಂತನಗರ (ಎ),
ರಾಜಪೂರ, ತಾಃ ಮತ್ತು ಜಿಃ ಕಲಬುರಗಿ.

ದಂಡ ಪ್ರಕ್ರೀಯಾ ಸಂಹಿತೆ ಕಲಂಃ **313** ರಡಿಯಲ್ಲಿ ಆರೋಪಿಯ ಹೇಳಿಕೆ.

ಪ್ರಃ 01- ಅಭಿಯೋಜನೆಯ ಪರವಾಗಿ ನುಡಿದ ಸಾಕ್ಷವನ್ನು ನೀನು ಕೇಳಿರುವೆಯಾ?

1 ನೇ ಆರೋಪಿತನ ಉತ್ತರಃ

ಪ್ರಃ 02-ಚಾಸಾ-6/ಪ್ರಾಸಾ-6 ಶ್ರೀ ವಿ.ಕೆ ಗಾಣಗೇರ್, ಅಬಕಾರಿ ಉಪ-ಅದೀಕ್ಷಕರು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 09-04-2018 ರಂದು ನಾನು ಕಚೇರಿಯಲ್ಲಿದ್ದಾಗ ಮಃ 03.5 ಗಂಟೆಗೆ ಯಾದಗಿರಿ-ವಾಡಿ ರಸ್ತೆಯಲ್ಲಿ ಬೈಕಿನಲ್ಲಿ ಮದ್ಯ ಹಾಗೂ ಬಿಯಾರ್ ಸಾಗಾಟ ನಡೆದಿರುವ ಬಗ್ಗೆ ಮಾಹಿತಿ ಬಂದಿರುತ್ತದೆ. ನಂತರ ನಾನು ಹಾಗೂ ಚಾಸಡಾ 3 ರವರು ಯಾದಗಿರಿ ಜಿಲ್ಲಾಧಿಕಾರಿಗಳ ಕಚೇರಿ ಹತ್ತಿರ ಹೋಗಿ ಚಾಸಾಃ 1 ಮತ್ತು 2 ರವರನ್ನು ಪಂಚರನ್ನಾಗಿ ಕರೆದುಕೊಂಡು ಅಲಿಪುರ ರಸ್ತೆಯಲ್ಲಿ ರಸ್ತೆಗಾವಲು ಮಾಡುತ್ತಿದ್ದೆವು. ಆಗ ಒಂದು ದ್ವೀಚಕ್ರ ವಾಹನದ ಮೇಲೆ ಬಿಳಿ ಗೋಣಿ ಚೀಲ ಇಟ್ಟುಕೊಂಡು ಬರುವುದು ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

1 ನೇ ಆರೋಪಿತನ ಉತ್ತರಃ

ಪ್ರಃ 03-ಚಾಸಾ-6/ಪ್ರಾಸಾ-6 ರವರು ಮುಂದುವರೆದು, ನಾವು ಸದರಿ ವಾಹನವನ್ನು ನಿಲ್ಲಿಸಿ ಸ್ಥಳದಲ್ಲಿ ಶೋದನಾ ಸಮುಚಿತ ಪತ್ರವನ್ನು ತಯಾರಿಸಿಕೊಂಡು ಪರಿಶೀಲನೆ ಮಾಡಲಾಗಿ ಮದ್ಯ ಹಾಗೂ ಬಿಯಾರ್ ಇರುವುದು ಕಂಡಬಂದಿರುತ್ತದೆ. ಬೈಕ್ ಚಾಲಕನಾಗಿದ್ದ ಆರೋಪಿ ಪರವಾನಿಗೆ ಇದೆಯೇ ಎಂದು ಕೇಳಿದಾಗ ಯಾವುದೇ ಉತ್ತರ ನೀಡಿರುವುದಿಲ್ಲ. ನಂತರ ಪರಿಶೀಲಿಸಿ ನೋಡಲಾಗಿ 90 ಮಿಲಿಯ ಒಸಿ ವಿಸ್ಕಿಯ 48 ಟೆಟ್ರಾ ಪಾಕೇಟುಗಳು, 330 ಮಿಲಿಯ 36 ಕೆ ಎಫ್ ಟಿನ್ ಗಳು

ಹಾಗೂ 650 ಮಿಲಿಯ 12 ಕೆ ಎಫ್ ಬಾಟಲಿಗಳು ಇರುವುದು ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

1 ನೇ ಆರೋಪಿತನ ಉತ್ತರಃ

ಪ್ರಃ 04-ಚಾಸಾ-6/ಪ್ರಾಸಾ-6 ರವರು ಮುಂದುವರೆದು, ಅವುಗಳನ್ನು ವಶಕೆ ಪಡೆದು ಎರಡು ಟೆಟ್ರಾ ಪಾಕೆಟು, ಒಂದು ಟಿನ್ ಹಾಗೂ ಒಂದು ಬಾಟಲಿಯನ್ನು ಮಾದರಿಯಾಗಿ ತೆಗೆದುಕೊಂಡಿದ್ದೆವು. ಆರೋಪಿತನನ್ನು ವಿಚಾರಿಸಲಾಗಿ ತನ್ನ ಹೆಸರು ವೆಂಕಟೇಶ ತಂದೆ ಮರೆಪ್ಪ ಶ್ರೀಗಿರಿ, ಸಾಃ ರಾಜಾಪೂರ ಎಂದು ತಿಳಿಸಿದ್ದನು. ವಾಹನ ಪರಿಶೀಲಿಸಲಾಗಿ ಅದು ಕೆಎ-33 ಯು-9030 ನಂಬರಿನ ಹೊಂಡಾ ಶೈನ್ ಬೈಕ್ ಆಗಿರುವುದು ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

1 ನೇ ಆರೋಪಿತನ ಉತ್ತರಃ

ಪ್ರಃ 05-ಚಾಸಾ-6/ಪ್ರಾಸಾ-6 ರವರು ಮುಂದುವರೆದು, ಸ್ಥಳದಲ್ಲಿ ಸಾಃ 4.30 ರಿಂದ 5.30 ವರೆಗೆ ಪಂಚನಾಮೆ ಮಾಡಿರುತ್ತೇನೆ. ಅದನ್ನು ಪಂಚರಿಗೆ ಓದಿ ಹೇಳಿ ಅವರ ಸಹಿ ಪಡೆದುಕೊಂಡಿರುತ್ತೇನೆ. ನಂತರ ಆರೋಪಿ ಹಾಗೂ ಮು.ಮಾಲಿನೊಂದಿಗೆ ಕಚೇರಿಗೆ ಬಂದು ಸರಕಾರದ ಪರವಾಗಿ ದೂರು ದಾಖಲಿಸಿರುತ್ತೇನೆ. ನಂತರ ದಿಃ 06.06.2018 ರಂದು ಚಾಸಾಃ 4 ರವರ ಮಾದರಿ ಮು.ಮಾಲನ್ನು ಮುಲಕ ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟಿರುತ್ತೇನೆ. ಅಲ್ಲದೇ ಚಾಸಾಃ 3 ರವರ ಹೇಳಿಕೆಯನ್ನು ಸಹ ಪಡೆದುಕೊಂಡಿದ್ದೆನು. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾಃ 7 ರವರಿಗೆ ಒಪ್ಪಿಸಿದ್ದೆನು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

1 ನೇ ಆರೋಪಿತನ ಉತ್ತರಃ

ಪ್ರಃ 06- ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುವಿರಾ?

1 ನೇ ಆರೋಪಿತನ ಉತ್ತರಃ

ಪ್ರಃ 07- ನಿಮಗೆ ಈ ಪ್ರಕರಣದಲ್ಲಿ ಏನನ್ನಾದರೂ ಹೇಳುವುದು ಇದೆಯಾ?

1 ನೇ ಆರೋಪಿತನ ಉತ್ತರಃ

ಪ್ರಃ 08- ನಿಮಗೆ ಈ ಪ್ರಕರಣದಲ್ಲಿ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ದಾಖಲೆಗಳನ್ನು ಸಲ್ಲಿಸುವುದು ಇದೆಯಾ?

1 ನೇ ಆರೋಪಿತನ ಉತ್ತರಃ

(ಮೇಲ್ಕಾಣಿಸಿದ ಸಾಕ್ಷಿದಾರರ ಹೇಳಿಕೆಗಳನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಇಂದು ತೆರೆದ ನ್ಯಾಯಾಲಯದಲ್ಲಿ ಆರೋಪಿತನಿಗೆ ಓದಿ ಹೇಳಲಾಯಿತು.)

ದಿನಾಂಕಃ 18.02.2026

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ..ದಂ.ಗಳು, ಯಾದಗಿರಿ.